


ಅರುಣ್ ಕಿಲ್ಲೂರು

# ಬದುಕಿನ ಪಾಠ

ಮಿತ್ತಬಾಗಿಲು ಎನ್ನುವ ಗ್ರಾಮದ ಬಳಿ ದೊಡ್ಡ ಕಾಡಿತ್ತು. ಆ ಕಾಡಿಗೆ ಹೊಂದಿಕೊಂಡು ಇರುವೆಗಳ ಗುಂಪೊಂದು ವಾಸ ಮಾಡುತ್ತಿತ್ತು. ಇರುವೆಗಳು ಬಹಳ ಶಿಸ್ತಿನಿಂದ ಪ್ರತೀ ದಿನ ಹಗಲಿನ ವೇಳೆ ಆಹಾರ ಸಂಗ್ರಹ ಮಾಡುತ್ತಿದ್ದವು. ತಾವು ಸಂಗ್ರಹಿಸಿ ತರುತ್ತಿದ್ದ ಹೆಚ್ಚುವರಿ ಆಹಾರವನ್ನು ಅವು ದಾಸ್ತಾನು ಇಡುತ್ತಿದ್ದವು. ಮಳೆಗಾಲ ಸಮೀಪಿಸಿತು. ಆಗ ಇರುವೆಗಳ ಹಿರಿಯಜ್ಜಿ ಗುಂಪಿನಲ್ಲಿದ್ದ ಎಲ್ಲ ಇರುವೆಗಳನ್ನು ಕರೆಯಿತು.

"ಇನ್ನು ಕೆಲವೇ ದಿನಗಳಲ್ಲಿ ಮಳೆಗಾಲ ಪ್ರಾರಂಭ ಆಗುತ್ತದೆ. ಮುಂದಿನ ಆರು ತಿಂಗಳು ಮಳೆ ಸುರಿದರೂ ಸುರಿದೀತು. ಮಳೆ ಬಿಡದೆ ಹೋದರೆ ನಮಗೆ ಆಹಾರ ಸಂಗ್ರಹ ಮಾಡಲು ಆಗುವುದಿಲ್ಲ. ಎಲ್ಲರೂ ಹೊರಗಡೆ ಹೋಗಿ ಸಕ್ಕರೆ, ಅಕ್ಕಿ, ಸಿಹಿ ತಿನಿಸುಗಳನ್ನು ಈಗಿಗಿಂತ ಹೆಚ್ಚು ಪ್ರಮಾಣದಲ್ಲಿ ತರಬೇಕು. ನಾವು ಆರು ತಿಂಗಳಿಗೆ ಆಗುವಷ್ಟು ಆಹಾರವನ್ನು ದಾಸ್ತಾನು ಮಾಡಬೇಕು'' ಎಂದು ಹೇಳಿತು.